Regd. No. M 1299 SATYAVADI Founded 1917

ಸತ್ಯವಾದಿ
SATYAVADI

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 30 ಸಂಚಿಕೆ 10 | ಬುಧವಾರ 11—9—46 | ಬಿಡಿ ಪ್ರತಿ 3 ಪೈ

' ಅನ್ನ ಅನ್ನ ' - ಇದೇ ಭಾರತದ ಏಕ ಧ್ವನಿ !

ಜವಾಬ್ದಾರಿ ಆಡಳಿತದಲ್ಲಿ ರಾಜಕೀಯ ಖೈದಿಗಳ ಬಿಡುಗಡೆ

ಕೊಚ್ಚಿ ಸೆ 10 — ಕೊಚ್ಚಿ ಸಂಸ್ಥಾನದಲ್ಲಿ ಮಿಶ್ರ ಆಡಳಿತ ಆರಂಭವಾಯಿತು. ಆ ನೆನಪಿಗಾಗಿ ರಾಜಕೀಯ ಬಂದಿಗಳಿಲ್ಲರೂ ಖುಲಾಸೆಯಾಗಬೇಕೆಂದು ಆಜ್ಞಾ ಪತ್ರ ಹೊರಟಿದೆ.

ಮೈಸೂರು ಅರಮನೆಯ ಮೇಲೆ ದಾಪೆ

ಬೆಂಗಳೂರು ಸೆ 10 — ನಾಲ್ವತ್ತು ಸಾವಿರ ರೂಪಾಯಿಗಳು ತಮಗೆ ಅರಮನೆಯಿಂದ ಸಲ್ಲಬೇಕೆಂದೂ ಕಲೆಗಾರರಾದ ಶ್ರೀ ಕೆ. ವೆಂಕಟಪ್ಪನವರು ಅರಮನೆಯ ಮೇಲೆ ಹೂಡಿದ್ದ ದಾವ ಈ ದಿನ ಹೈಕೋರ್ಟಿನಲ್ಲಿ ಅಪೀಲಾಗಿ ಬಂದಿತ್ತು. ವಾದಿಯ ಪರ ಶ್ರೀ ಶ್ರೀನಿವಾಸಯ್ಯಂಗಾರ್ ವಾದಿಸಿದರು. ವಾದವಿವಾದಗಳನ್ನು ಬುಧವಾರಕ್ಕೆ ಮುಂದೂಡಲಾಯಿತು

150000 ರೂ ಪುಂಡುಗಂದಾಯ

ಕಲ್ಕತ್ತಾ ಸೆ. 9 — ಡಾಕ್ಕಾ ನಗರ ಗಲಭೆಯ ಬಗ್ಗೆ ಅಲ್ಲಿ ರೂ. 150000 ಪುಂಡು ಗಂದಾಯ ವಿಧಿಸಲಾಗಿದೆ. ಈದ್ ಹಬ್ಬದ ದಿನ ಕಲ್ಲೆಸದರೆಂದು 3000 ರೂ. ಪುಂಡ-ಗಂದಾಯ ಹಿಂದೂಗಳ ಮೇಲೆ ಬಿದ್ದಿದೆ.

ಪಾಕೀಸ್ತಾನಕ್ಕೆ ರಷ್ಯಾ ಸಹಾಯ

ಬೊಂಬಾಯಿ ಸೆ- 10 — ಅಖಿಲ ಭಾರತ ಮುಸ್ಲಿಂ ಲೀಗಿನ ಪ್ರಧಾನ ಕಾರ್ಯದರ್ಶಿ ಬ್ರಿಟಿಷ್ ಪ್ರವಾಸ ಹೋಗುವರು. ಬ್ರಿಟನ್ನಿನಿಂದ ರಷ್ಯಾವಿಗೂ ಸಹ ಪ್ರಮಾಣ ಮಾಡಲಿರುವರಂತೆ !

ಶಾಸನ ಸಭೆಯಲ್ಲಿ ಅಧ್ಯಕ್ಷರೇ ಇಲ್ಲ

ಕರಾಚಿ, ಸೆ. 10 — ಸಿಂಧ್ ಶಾಸನಸಭೆಗೆ ಉಪಾಧ್ಯಕ್ಷರಿಣಿ ಮಿಸ್ ಸಿಪಾಯಿ ಮೂಲಿನಿ ರಾಜೀನಾಮೆ ಇತ್ತರು. ಅಧ್ಯಕ್ಷರಿಲ್ಲದೆ ಕೊಂದರೆಯಾಗಿದೆ.

ಶಸ್ತ್ರಾಗಾರ ಪತ್ತೆ

ದಕ್ಷಿಣ ಪ್ಯಾಲಿಸ್ಟೈನಿನಲ್ಲಿ ಬ್ರಿಟಿಷ್ ವಿಮಾನದಳದವರು ಎರಡು ಗುಪ್ತ ಶಸ್ತ್ರಾಗಾರಗಳನ್ನು ಪತ್ತೆ ಮಾಡಿರುವರೆಂದು ತಿಳಿಯಬಂದಿದೆ.

ವಿದ್ಯಾರ್ಥಿಗಳ ಮುಷ್ಕರ

ಕಾಶೀ ಹಿಂದೂ ಯೂನಿವರ್ಸಿಟಿಯ 5 ಸಾವಿರ ವಿದ್ಯಾರ್ಥಿಗಳಲ್ಲಿ 4 ಸಾವಿರಕ್ಕೆ ಮೇಲ್ಪಟ್ಟ ಮುಷ್ಕರ ಹೂಡಿದಿದ್ದಾರೆ.

ರಸ್ತೆ ಯೋಜನೆ

ತಮ್ಮ ಪ್ರಾಂತ್ಯದಲ್ಲಿ ರೂ. 42000000 ವೆಚ್ಚದಲ್ಲಿ ಸುಮಾರು 900 ಮೈಲಿ ರಸ್ತೆ ತಯಾರಿಸುವ ಯೋಜನೆಯನ್ನು ಬೀಹಾರು ಸರಕಾರದವರು ಮಾಡಿದ್ದು, ಅದು ಬೇಗನೆ ಅಮಲಿನಲ್ಲಿ ಬರುವುದೆಂದು ತಿಳಿಯಬಂದಿದೆ.

ಆಟಂ ಬಾಂಬಿಗೆ ಅಹುತಿ

ನ್ಯೂಯಾರ್ಕ್ ಸೆ 4— ಕಳೆದವರ್ಷ ನಾವು ಪೆಸಿಫಿಕ್ಕಿನಲ್ಲಿ ಹಾಕಿದ ಒಂದು 65 ಪೌಂಡು ತೂಕದ ಬಾಂಬಿನಿಂದ 2 ಲಕ್ಷ ಮಂದಿ ಗತಪ್ರಾಣರಾದರೆಂದು ಸುಪ್ರಸಿದ್ಧ ಸೈಯಿಂಟಿಸ್ಟ್ ಗುಯಾಸ್ಟೇವು ರವರು ಹೇಳಿದ್ದಾರೆ.

ಜಿನ್ನಾರವರು " ಬ್ರಿಟಿಷರ ಪಗಡೆ "

ಲಾಹೋರ್ ಸೆ. 9 — ' ಜ್ಞಾನದಿಂದಲೋ ಅಜ್ಞಾನದಿಂದಲೋ ಮಿ|| ಜಿನ್ನಾರವರು ಬ್ರಿಟಿಷರ ಪಗಡೆಯಾಗಿ ಬಿಟ್ಟಿದ್ದಾರೆ ' ಎಂಬುದಾಗಿ ಖಾಕ್ಸರ ನಾಯಕ ಅಲ್ಲಾ ಮುಷ್ಕೂಕಿ ಮಿ|| ಜಿನ್ನಾರಿಗೆ ಪತ್ರ ಬರೆದಿದ್ದಾರೆ. ಪಾಕೀಸ್ತಾನ-ಸಾಧನೆಗೆ ಗಾಂಧೀಜಿ ಸಹಾಯ ಅಗತ್ಯವೆಂದು ಅದೇ ಪತ್ರದಲ್ಲಿ ತಿಳಿಸಲಾಗಿದೆ

ಜನರಲ್ ಅಸೆಂಬ್ಲಿಗೆ ಪ್ರತಿಭಟನೆ

ಡರ್ಬಾಕ್ ಸೆ. 10 — ಜನರಲ್ ಅಸೆಂಬ್ಲಿ ಆರಂಭ ದಿನ ದಕ್ಷಿಣ ಆಫ್ರಿಕಾ ಭಾರತೀಯರೆಲ್ಲರೂ ಹರತಾಳ ನಡೆಸಬೇಕೆಂದು ತೀರ್ಮಾನಿಸಿರುವರು.

ಇಂಡೋನೇಷಿಯಾದಲ್ಲೂ ತಾತ್ಕಾಲಿಕ ಸರ್ಕಾರ

ಭಾರತದಲ್ಲಿ ಬ್ರಿಟಿಷರು ನಡೆಸಿದ ಒಪ್ಪಂದದ ರೀತಿಯಲ್ಲಿ ಡಚ್ಚರು ಇಂಡೋನೇಷಿಯಾದಲ್ಲಿ ವರ್ತಿಸಲು ಯತ್ನಿಸುತ್ತಿದ್ದಾರೆ.

ಬಲ್ಗೇರಿಯಾದಲ್ಲಿ ರಾಜಕ್ವ ಪತನ

ಸೋಫಿಯಾ ಸೆ. 9 — ಬಲ್ಗೇರಿಯಾ-ಸ್ಥಿಹಾಸನದಲ್ಲಿ 9 ವರ್ಷದ ಸೈಮನ ರಾಜರು ಮುಂಡಿಸಬೇಕೇ ಎಂಬ ವಿಷಯದಲ್ಲಿ ಪ್ರಜಾ ಪ್ರಭುತ್ವದ ಪರ 3 ಮಿಲಿಯ 8 ಲಕ್ಷ ಒಟ್ಟುಗಳು ಮತ್ತು ರಾಜಕ್ವದ ಪರ 1 ಲಕ್ಷ 80 ಸಾವಿರ ಓಟುಗಳೂ ಬಂದವು.

ಕಾಂಗ್ರೆಸ್ ಜಿನ್ನಾ ಒಪ್ಪಂದವೇ ?

ಬೊಂಬಾಯಿ ಸೆ. 10 — ಮಿ|| ಜಿನ್ನಾ ಒಪ್ಪಂದಕ್ಕೆ ಸಿದ್ಧವಾಗುತ್ತಿದ್ದಾರೆ. ಕಾಂಗ್ರೆಸ್ ಮತ್ತು ಬ್ರಿಟನ್ನಿನೊಡನೆ ಒಪ್ಪಂದ ಮಾಡಿಕೊಳ್ಳಲು ಪ್ರಯತ್ನ ಮಾಡುತ್ತಿದ್ದಾರೆ. ಬಂಗಾಳ ಪ್ರಧಾನಿ ಮಿ|| ಸುಹ್ರವರ್ದಿ ರಾಯಭಾರ ವಹಿಸಿರುವರು—ಎಂದು ಭಾವನೆ ಮಾಡುತ್ತಿದೆ.

ವಾರ್ತೆಗಳು

ಪ್ಯಾಲಿಸ್ಟೈನ್ ವಿಷಯದಲ್ಲಿ ಲಂಡನ್ನಿನಲ್ಲಿ ಸೇರುವ ಸಮ್ಮೇಳನದಲ್ಲಿ ' ನಿರಾಶ್ರಿತರೆಲ್ಲರಿಗೂ ಸರ್ವ ರಾಜ್ಯಗಳೂ ಆಶ್ರಯವೀಯಬೇಕು ' ಎಂಬ ನಿರ್ಣಯವನ್ನು ಅರಬ್ ರಾಜ್ಯಗಳು ಮಂಡಿಸುವವು

ಲಂಡನ್ನಿನಲ್ಲಿ ಸೇರುವ ಪ್ಯಾಲಿಸ್ಟೈನ್ ಸಮ್ಮೇಳನದಲ್ಲಿ ಪ್ಯಾಲಿಸ್ಟೈನಿನ ಅರಬ್ಬರು ಮತ್ತು ಎಹೂದಿಗಳು ಭಾಗವಹಿಸುವುದಿಲ್ಲ.

ಯು. ಎಸ್. ಆರ್. ಆರ್. ಎ. ಸಮಿತಿಗೆ ಭಾರತವು ಹತ್ತು ಕೋಟಿ ರೂಪಾಯಿಗಳವರೆಗೆ ಸಹಾಯ ಮಾಡಿದುದಕ್ಕಾಗಿ ಪ್ರಪಂಚ ಸಂಸ್ಥೆ ಪಂ || ನೆಹರೂ ವಿಗೆ ವಂದನೆಯರ್ಪಿಸಿದೆ.

ಬೊಂಬಾಯಿ ಬೈಕುಲಾದಲ್ಲಿ ಗಲಭೆ ನಡೆದು ಪರಿಸ್ಥಿತಿ ಹದಕ್ಕೆ ಒಂದಿದೆ ಮೊನ್ನೆಯ ದಿವಸ ನಡೆದ ಇರಿತದಿಂದ ಒಂದು ಸಾವು ಮತ್ತು ಒಂಭತ್ತು ಮಂದಿಗೆ ಗಾಯಗಳೂ ಆದವು.

ಪ್ಯಾಲಿಸ್ಟೈನಿನ ಎಹೂದಿ ರಾಷ್ಟ್ರೀಯ ಸಮಸ್ಯರು ಅಸಹಕಾರ ಪ್ರವರ್ತಿಸಲು ತೀರ್ಮಾನಿಸಿದ್ದಾರೆ.

ಷೇಕ್ ಅಬ್ದುಲ್ಲಾರಿಗೆ ೩ ವರ್ಷ ಸಜಾ ೧೫೦೦೦ ರೂ. ಜುಲ್ಮಾನೆ

ಶ್ರೀನಗರ ಸೆ 10 — ರಾಷ್ಟ್ರೀಯ ಪರಿಷತ್ತಿನ ಅಧ್ಯಕ್ಷ ಷೇಕ್ ಮಹಮದ್ ಅಬ್ದುಲ್ಲಾರವರಿಗೆ ಕಾಶ್ಮೀರ ಪ್ರಭುತ್ವವು ಮೂರು ವರ್ಷ ಸಾದಾ ಸಜ ಮತ್ತು ರೂ. 15000 ಜುಲ್ಮಾನೆ ವಿಧಿಸಿದೆ.

ತಿನಿಯಲು ಬಂದವನು ಅವನೇ

ಸಿಮ್ಲಾ ಸೆ. 9 — ತಾತ್ಕಾಲಿಕ ಸರಕಾರದ ವಿದ್ಯಾ ಸದಸ್ಯ ಸರ್ ಜಾಫತ್ ಅಹಮದ್‌ರವರು ಈ ದಿನ ಮ್ಯಾಜಿಸ್ಟ್ರೇಟರು ತೋರಿಸಿದ ನಾಲ್ವರಲ್ಲಿ ಒಬ್ಬನನ್ನು ಗುರುತಿಸಿದರು. ಅವನನ್ನು ಜಾವಾನಿನ ಮೇಲೆ ಬಿಡಲಿಲ್ಲ.

ಉಪ್ಪಿನ ತೆರಿಗೆ ರದ್ದಾಗುವುದು

ನವದೆಹಲಿ ಸೆ. 9 — ' ಉಪ್ಪಿನ ಮೇಲಿರುವ ತೆರಿಗೆ ಆದಷ್ಟು ಬೇಗನೆ ರದ್ದಾಗುವುದು. ಶಾಂತಿಯಿಂದಿರಿ ' ಎಂದು ಗಾಂಧಿ ಮಹಾತ್ಮರು ಪ್ರಾರ್ಥನಾ ಸಂದೇಶ ತಿಳಿಸಿದರು

ಭಾರತಕ್ಕೆ ಅನ್ನ ಕೊಡಿ

ಕೂಪರ್‌ಹೇಗರ್, ಸೆ 9 — ' ಭಾರತ ಬಹಳ ಸಂಕಟದಲ್ಲಿದೆ. ಅದಕ್ಕೆ ಬೇಕಿರುವುದು ಅನ್ನ. ನಾಲ್ಕತ್ತು ಕೋಟಿ ಭಾರತೀಯರ ಪ್ರಕಂಠದಿಂದ ಹೊರಬೀಳುತ್ತಿರುವ ಕೂಗು ' ಅನ್ನ ಕೂಗು ' ಎಂದು ಶ್ರೀ ವಾಶ್ಲವ ವ್ಯವಸಾಯ ಸಮ್ಮೇಳನದಲ್ಲಿ ನುಡಿದರು.

ಸಂಧಾನ ಸಮ್ಮೇಳನ

ಲಂಡನ್ ಸೆ. 9 — ಬ್ರಿಟಿಷ್ ಪ್ರಭುತ್ವ ನೂತನ ಸಂಧಾನವನ್ನು ಆಹ್ವಾನಿಸಿದರೆ, ನಾನು ಆಹ್ವಾನವನ್ನು ಮನ್ನಿಸುತ್ತೇನೆ ಎಂಬುದಾಗಿ ಮಿ|| ಜಿನ್ನಾ ' ಡೇಲಿ ಮೇಲ್ ' ವಿಶೇಷ ಪತ್ರಿಕಾದಾರನಿಗೆ ತಿಳಿಸಿದರು. ಮಿ|| ಜಿನ್ನಾರವರು ವಿಯೆಂದುವರಿಯುತ್ತಾ ಇದೇ ತಾತ್ಕಾಲಿಕ ಸರ್ಕಾರವನ್ನು ತಮ್ಮ ಶಕ್ತಿಯಿಂದ ಬ್ರಿಟಿಷರು ಎತ್ತಿ ಹಿಡಿದರೆ ಮುಸ್ಲಿಂರು ಅದನ್ನು ತಡೆಯಬಲ್ಲರು. ಕಾರ್ಮಿಕ ಸರ್ಕಾರ ಕಾಂಗ್ರೆಸಿನ ಕೈ ಬಳಕಕ್ಕೆ ಬಿದ್ದಿತು. ಆ ಸರ್ಕಾರ ಹೊಸದು. ಏನೂ ತಿಳಿವಳಿಕೆಯಿಲ್ಲ ಪಂ|| ನೆಹರು ಭಾಷಣ ನನ್ನನ್ನು ಇರಿದಿದೆ ತ್ರಿಮೂರ್ತಿಗಳಿಲ್ಲ ದ್ವೇಷ ಬಂದರೆ ಕಾಲಕ್ಕೆ ಸರಿಯಾಗಿ ಮುಸ್ಲಿಂರು ಎಚಂಬಧಿಸುವರು ' ಎಂದರು

ಜಪಾನ್ ಸಂಪೂರ್ಣವಾಗಿ ನಿರ್ಬಲವಾಗಬೇಕೆಂದು ಚೀನೀ ವಿದೇಶಾಂಗ ಮಂತ್ರಿ ತಿಳಿಸಿದ್ದಾರೆ.

ಫಾರ್ವರ್ಡ್ ಬ್ಲಾಕ್ ಘಟನಾ ಸಮಿತಿಯನ್ನು ಬಹಿಷ್ಕರಿಸಿರುವರು.

ವೀರ ಸವಾರ್ಕರರ ಮುತ್ತಿನಂಥ ಮಾತುಗಳು

ಸರ್ ಸ್ಟಾಫರ್ಡ್ ಕ್ರಿಪ್ಸ್—ಕೆನಡಾ ದೇಶವು ಫೆದರೇಷನ್ನಾಗಿ ಏರ್ಪಡುವದಕ್ಕೆ ಮುಂಚೆ ವಿವಿಧ ಭಾಗಗಳಿಗೆ ಸ್ವಯಂ ನಿರ್ಣಯ ಹಕ್ಕು ಕೊಡಲ್ಪಟ್ಟಿತು.

ಸವಾರ್ಕರ್— ಕೆನಡಾದಲ್ಲಿಯು ರಾಷ್ಟ್ರಗಳು ಪ್ರತ್ಯೇಕತೆಯನ್ನು ಹೊಂದಿದ್ದವು. ಎಲ್ಲರೂ ಕಲೆತು ಒಂದಾಗುವಿರಾ ಎಂದು ಕೇಳಲೇಕಾಗಿ ಬಂತು. ಇಂಡಿಯಾವು ಈಗಲೇ ಅವಿಭಾಜ್ಯ ರಾಜ್ಯವಾಗಿದೆ. ಸರ್ಕಾರವನ್ನು 'ಭಾರತ ಸರಕಾರವೆನ್ನುತ್ತಿದ್ದಾರೆ. ಸೇನೆಯನ್ನೂ ನಾವಿಕಾದಳವನ್ನೂ, ಭಾರತ ಸೇನೆ. ಭಾರತ ಸೇನೆ, ಭಾರತ ನೌಕಾದಳ ಎನ್ನುತ್ತಿರುವರು.

[ಮುಂದೆ ಕ್ರಿಪ್ಸರು ಬಾಯಿ ತಿಗೆಯಲಿಲ್ಲ ನೆಹ್ರೂ ಪಂಡಿತರ ವಾರಪತ್ರಿಕೆ 'ಇಂಡಿಪೆಂಡೆಂಟ್' ಕ್ರಿಪ್ಸರು ಜೀವಿತಾನಂತರವೂ ಈ 'ಇಂಟರ್ವ್ಯೂವನ್ನು ಮರೆತುಹೋಗನೆಂದೂ, ಶ್ರೀ ಸವಾರ್ಕರರು ಅದ್ಭುತ ಮೇಧಾವಂತರೆಂದೂ ಪ್ರಶಂಸಿಸಿತ್ತು]

ಲೂಯಿ ಫಿಷರ್—ಸಾವರ್ಕರವರೇ! ನೀವು ಪಾಕಿಸ್ಥಾನವನ್ನು ಅಂಗೀಕರಿಸುವದಲ್ಲಿ ಏನು?

ಸವಾರ್ಕರ್—ಅಮೇರಿಕಾ ಸಂಯುಕ್ತ ಸರ್ಕಾರದಲ್ಲಿ ನೀಗ್ರೋಸ್ಥಾನವನ್ನು ಏಕೆ ಪ್ರಸ್ತಾಪಿಸಕೂಡದ.

ಲೂ ಫಿ.— ಅದು ಜಾತೀಯತೆಯ ವ್ಯತಿರೇಕವು.

ಸವಾರ್ಕರ್— ಅದೇ ತಂಟೆ. ಲೂಯಿ ಫಿಷರವರೇ! ಪಾಕಿಸ್ಥಾನವು ಜಾತೀಯತೆಯ ವ್ಯತಿರೇಕವು' ಪ್ರಜಾಪ್ರತಿನಿಧ್ಯ ಸರ್ಕಾರದ ತತ್ವಕ್ಕೆ ವಿರುದ್ಧವಾದದ್ದು.

(ಲೂಯಿಫಿಷರ್ ಕೋಪಗೊಂಡವರಾಗಿ ಎಲ್ಲಿಯೂ ಸವಾರ್ಕರರ ಹೆಸರನ್ನು ಎತ್ತಲಿಲ್ಲ)

ಒಬ್ಬ ಸೋಷಲಿಸ್ಟ್ - ತಾವು ಸ್ವಾಲಿಖಿತ ಬರೆದಿರುವದನ್ನು ಓದಿಹುದಿರಾ?

ಚಳಿ ಜ್ವರಕ್ಕೆ

ಉಚಿತವಾಗಿ ಔಷಧವನ್ನು ಕೊಡಲಾಗುವುದು.

ಆ ಶೋ ಕಾ ಫಾ ರ್ಮೆ ಸಿ ಲ್ಯೂನ್ಸ್ ಡೋಜರ್, ಮೈಸೂರ

ಚೋಳದ ವಿಚಾರ

ಮಹಾಭಾರತ ಯುದ್ಧಕಾಲದಲ್ಲಿ ಪಾಂಡವರ ಹಾಗೂ ಕೌರವರ ಸೇನೆಗಳೆರಡಕ್ಕೂ ಆಹಾರವನ್ನೊದಗಿಸುತ್ತಿದ್ದವರೇ ಚೋಳರು. ಶಿಬಿ ಚಕ್ರವರ್ತಿ ಮನು ಮೊದಲಾದವರೂ ಚೋಳವಂಶೀಯರೇ.

ಚೋಳರ ಆಳ್ವಿಕೆಯಲ್ಲಿ ಕಾವೇರಿ ಪಟ್ಟಣವು ಪ್ರಧಾನ ರೇವು ಪಟ್ಟಣವಾಗಿತ್ತು. ವಿದೇಶಗಳ ಹಡಗುಗಳು ವ್ಯಾಪಾರ ನಿಮಿತ್ತವಾಗಿ ತಂಡತಂಡವಾಗಿ ಬಂದು ಈ ಬಂದರಿನಲ್ಲಿ ನಿಲ್ಲುತ್ತಿದ್ದವು. ಈಗ ಇದು ಒಂದು ಅನಾವಶ್ಯಕ ಸ್ಥಳವಾಗಿದೆ.

ಚೋಳರು ವಿಗ್ರಹಗಳ ಪ್ರತಿಷ್ಠೆಯಲ್ಲಿಯೂ ದೇವಾಲಯಗಳ ನಿರ್ಮಾಣದಲ್ಲಿಯೂ ಅಗ್ರತಾಂಬೂಲವನ್ನು ಹೊಂದಲರ್ಹರಾದವರು. ಇಂದು ದಕ್ಷಿಣ ದೇಶದಲ್ಲಿರುವ ಪುರಾತನ ದೇವಾಲಯಗಳೆಲ್ಲವೂ ಚೋಳರಿಂದ ನಿರ್ಮಾಣ ಮಾಡಲ್ಪಟ್ಟವುಗಳೇ ಆಗಿರುತ್ತವೆ.

ಚೋಳರಾಜರ ಕಾಲದಲ್ಲಿ ಸತ್ಯದಿಂದ ದ್ರವ್ಯಾರ್ಜನೆ ಮಾಡುವಂಥವರೇ ಗ್ರಾಮದ ಶ್ರೇಷ್ಠರಾಗಿ ನಿಯಮಿಸಲ್ಪಡುತ್ತಿದ್ದರು.

ಇಂಥ ರಾಜ್ಯವು ರಾಮರಾಜ್ಯದಂತಿತ್ತೆಂದರೆ ತಪ್ಪಾಗದಷ್ಟೆ!

ಸವಾರ್ಕರ್ — ಸಾವರ್ಕರ್ ಬರೆದಿರುವನ್ನೂ ಯಾವನನ್ನಾದರೂ ಸ್ವಾಲಿಖಿತ ಓದಿರುವನೇ?

ಕೇ॥ ಶ್ರೀ॥ ಶ್ರೀ ಶ್ರೀನಿವಾಸ ಶಾಸ್ತ್ರಿಗಳವರು ಶ್ರೀ-ಸವಾರ್ಕರವರ ನಿರಾಡಂಬರವಾದ ಮನೆಯಲ್ಲಿಯೇ ಇರುವದು.

ಸವಾರ್ಕರ್ (ಶುಷ್ಕವಾಗಿ) ಅಂದರೆ ಮೂರ್ಖ ದ್ವೀಪಗಳಿಗಿಂತ ಇದು ಉತ್ತಮವಾದ ನಿವಾಸ ಸ್ಥಾನವು.

ಸತ್ಯವಾದಿ

ದಿನ ಪತ್ರಿಕೆ. ತಿಂಗಳಿಗೆ ಆಠಾಣೆ

ಸೋಮವಾರದ ಸಂಚಿಕೆ

ವಾರ್ಷಿಕಚಂದಾ

ಪರಸ್ಥಳಕ್ಕೆ ಅಂಚೆವೆಚ್ಚಸೇರಿ I--12--0

Edited, Printed and Published by M. S. Krishna Rao at the Satyavadi Press, Chamaraja Agrahar, Mysore,

At Ranjit

2nd Houseful Week

Anmol Ghadi

ನೂರ್‌ಜಹಾ— ಸುರೇಂದ್ರ

ಜಹರ್ ರಾಜಾ — ಸುರಿಯ

ಪಾತ್ರವಹಿಸಿರುವ

ಅನ್ಮೋಲ್ ಘಡಿ

(ಅಮೂಲ್ಯ ಗಡಿಯಾರ)

At Opera From 7–9–46

MYSON

* ಬೇಬಿ ಕಮಲ * ಯು. ಆರ್. ಜೀವರತ್ನಂ ನಟಿಸಿರುವ

ನನ್ನ ಮಗ

ತಮಿಳು) ಪ್ರತಿದಿನ 3 ಆಟಗಳು

For Good Printing

L. N. Press

Sriramp et, MYSORE

Get Medical Diplomas

At home : — Ayurvedic Homeopathic, Unani, etc Prospectus Free.

Old Indian Medical College Kotgarh, Simla

ನಮ್ಮ ಆರೋಗ್ಯ ಆನಂದದಾಯಕ ಜೀವಿತಕ್ಕೆ



'ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಅಪೂತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

ಗಳಿಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮಂಡಿಪೇಟೆ.

ಸತ್ಯತೆಯ ಅಳತೆ

ಅಮೇರಿಕಾ ಜನಾಂಗದಲ್ಲಿ ನೂರಕ್ಕೆ ಎಷ್ಟು ಜನರು ಸತ್ಯಸಂಧರು ಹೊಂದು ವರೋ ಎಂದು ತಿಳಿದುಕೊಳ್ಳಲಿಕ್ಕೆ ಒಂದು ಕಂಪೆನಿಯವರು ತಮ್ಮ ವಿಳಾಸವುಳ್ಳ 30 ಕವರುಗಳನ್ನು ಪ್ರತಿ ಕವರಿನಲ್ಲಿಯೂ 250 ಡಾಲರ್ ನೋಟುಗಳನ್ನಿಟ್ಟು ನ್ಯೂಯಾರ್ಕ್ ಪಟ್ಟಣದಲ್ಲಿ ಅಲ್ಲಲ್ಲಿ ಚಲ್ಲರಲಾಗಿ ಅವು ಸಿಕ್ಕಿದವರ ಪೈಕಿ 11 ಮಂದಿಗಳು ಮಾತ್ರ ಆವುಗಳನ್ನು ವಾಪಸ್ಸು ಕೊಡಲು ಕಂಪೆನಿಗೆ ಬಂದರು. ಮಿಕ್ಕ 19 ಮಂದಿಗಳು ಬರಲಿಲ್ಲ. ಆ ನೋಟುಗಳನ್ನು ತಂದ 11 ಮಂದಿಗೆ ಆ ನೋಟುಗಳನ್ನು ಬಹುಮಾನವಾಗಿ ಕೊಟ್ಟು ಕಳುಹಿಸಿದರು. ಅಂದರೆ ಅಮೆರಿಕಾದಲ್ಲಿ ನೂರು ಜನರಲ್ಲಿ 36 ಮಂದಿ ಸತ್ಯಸಂಧರು ಹೊರಟಂತಾ ಯಿತೆಂದು ಆ ಕಂಪೆನಿಯವರು ಪ್ರಕಟಿಸಿದರು. ಇದಿಷ್ಟು ವಿಷಯಗಳನ್ನು ತಿಳಿದುಕೊಳ್ಳಲು ಆ ಕಂಪೆನಿಯವರು 7500 ಡಾಲರುಗಳ ಪ್ಟ ಖರ್ಚುಮಾಡಿಕೊಂಡರು. (ನ.ಸಂ)

ರೈಲ್ವೇ ಗಾಡಿಯಲ್ಲಿ
ಇನ್ನು ಮೇಲೆ
ಬೀಡಿ ಸಿಗರೇಟು ಸೇದಬಾರದು

ರೈಲ್ವೆ ಆಕ್ಟ್ 53 ಸೆಕ್ಷನ್ ಕೆಳಗೆ ರೈಲ್ವೆ ಗಾಡಿಯಲ್ಲಿರುವ ಇತರ ಪ್ರಯಾಣಿಕರ ಅನುಮತಿ ಇಲ್ಲದೇ ಬೀಡಿ ಸಿಗರೇಟು ಸೇದದಂತೆ ಇಲ್ಲದಿದ್ದರು, ಈ ಸೆಕ್ಷನ್ನು ಜಾರಿಯಲ್ಲಿಯೇ ಬಂದಿಲ್ಲ. ರೈಲ್ವೆ ಬೋರ್ಡಿನವರು ಇವನ್ನು ಅಮಲಿನಲ್ಲಿ ತರಬೇಕೆಂದು ನಿರ್ಧರಿಸಿರುವರು. ಇನ್ನು ಮೇಲೆ ಈ ಕಾನೂನು ಎಲ್ಲ ತರಗತಿಯ ಪ್ರಯಾಣೀಕರಿಗೆ ಅನ್ವಯಿಸುವುದು ಇತರ ಪ್ರಯಾಣಿಕರ ಅನುಮತಿ ಇಲ್ಲದೇ ಯಾರಾದರೊಬ್ಬರು ಗಾಡಿಯಲ್ಲಿ ಬೀಡಿ ಸಿಗರೇಟ ಸೇದಿದರೆ ರೂ 50 ದಂಡ. ಪ್ರಯಾಣಿಕರೇ ಎಚ್ಚರಿಕೆ.

ಸಾದರ ಸ್ವೀಕಾರ

ಮೈಸೂರು, ಸೆ 13 — ಪ್ರಮುಖ ವಜ್ರ ವ್ಯಾಪಾರಿ ಮೆ॥ ಐ. ಜೆ. ಹಾಲ್‌ನವರು ಕಳುಹಿಸಿರುವ ಡಿಸಿಂಟಿಸೈಡ್ ಜಾಹೀರಾತಿನ ಸುಲಭ ಬೆಲೆಯ ಆಂದವಾದ ಚೀಲವನ್ನು ಸ್ವೀಕರಿಸಿದ್ದೇನೆ.

At Ranjit

3nd Houseful Week

Anmol Ghadi

ನೂರ್‌ಜಹಾ — ಸುರೇಂದ್ರ

ಜಹಂಗೀರ್ ರಾಜಾ — ಸುರಿಯ

ಪಾತ್ರವಹಿಸಿರುವ

ಅನ್ಮೋಲ್ ಘಡಿ

(ಅಮೂಲ್ಯ ಗಡಿಯಾರ)

At Opera ☆☆ From 7-9-46

MYSON

* ಬೇಬಿ ಕಮಲ * ಯು. ಆರ್. ಜೀವರತ್ನಂ ನಟಿಸಿರುವ

ನನ್ನ ಮಗ

ತಮಿಳು) ಪ್ರತಿದಿನ 3 ಆಟಗಳು

For Good Printing

L. N. Press

Sriramp et, MYSORE

Get Medical Diplomas

At home : — Ayurvedic Homeopathic, Unani, etc Prospectus Free.

Old Indian Medical College Kotgarh, Simla

ಯುವಕ ಸಂಘ

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯುಳ್ಳವರನ್ನಾಗಿ ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂಧ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ. —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಣ ವ್ಯಾಪಾರಿಗಳು)

೧೪, ಗೋವಿಂದಪ್ಪ ನಾಯಕ ರಸ್ತೆ, ಜಿ. ಟಿ. ಮದರಾಸು.